

## ಬರ್ತ್‌ಡೇ ಗರ್ಲ್

'ಸಿನಿಮಾಗಳೇ ನನ್ನನ್ನು ಜೀವಂತವಾಗಿಟ್ಟಿವೆ. ನನ್ನ ಸಿನಿಮಾಗಳನ್ನು ನಾನು ಕೇವಲ ಹೊಟ್ಟೆಪಾಡಿಗಾಗಿ ಮಾಡುತ್ತಿಲ್ಲ. ನಾನು ಜೀವಂತವಾಗಿರುವುದಕ್ಕೆ ಅವು ಒಂದು ರೀತಿಯಲ್ಲಿ ಕಾರಣಗಳು' ಎಂದಿದ್ದಾಳೆ ಅಲಿಯಾ ಭಟ್. ಕಳೆದ ವಾರ 25ನೇ ಹುಟ್ಟುಹಬ್ಬವನ್ನು ಬಲ್ಗೇರಿಯಾದಲ್ಲಿ ಸಿನಿಮಾ ಸೆಟ್‌ನಲ್ಲೇ ಸಹನಟರ ಜತೆ ಆಚರಿಸಿದ ಅಲಿಯಾ, 'ಈ ಸಲ ಹುಟ್ಟುಹಬ್ಬದ ಆಚರಣೆಗೆ ಮನೆಯವರನ್ನು ಮಿಸ್ ಮಾಡಿಕೊಂಡಿದ್ದೇನೆ' ಎಂದಿದ್ದಾಳೆ.

ಬಲ್ಗೇರಿಯಾದಲ್ಲಿ ಅಲಿಯಾ ಭಟ್ ನಟಿಸುತ್ತಿರುವ ಚಿತ್ರ 'ಬ್ರಹ್ಮಾಸ್ತ್ರ'ದ ಶೂಟಿಂಗ್ ಇನ್ನೂ ಮುಗಿದಿಲ್ಲ. ಬರ್ತ್‌ಡೇ ಸಂಭ್ರಮದಲ್ಲಿ ಚಿತ್ರದ ನಿರ್ದೇಶಕ ಅಯಾನ್ ಮುಖರ್ಜಿ, ಚಿತ್ರದ ನಾಯಕ ರಣಬೀರ್ ಕಪೂರ್‌ನ ಅಮ್ಮ ನೀತು ಮತ್ತಿತರರು ಭಾಗವಹಿಸಿದ್ದರು. ಹಾಗೆಂದು ಬರ್ತ್‌ಡೇ ಬಗ್ಗೆ ಅಲಿಯಾಗೆ ಅಂತಹ ಮೋಹವೇನೂ ಇಲ್ಲವಂತೆ. 'ಈ ಸಲ ಕೆಲಸದ ಸ್ಥಳದಲ್ಲೇ ಬರ್ತ್‌ಡೇ ನಡೆದಿದೆ. ಶೂಟಿಂಗ್ ಸೆಟ್‌ನಲ್ಲೇ ಬರ್ತ್‌ಡೇ ಆಚರಿಸಿದರೆ ವರ್ಷವಿಡೀ ಶೂಟಿಂಗ್ ಇರಲೂಬಹುದು. ಇದೂ ಸಂತೋಷದ ಸಂಗತಿಯೇ' ಎಂದಿದ್ದಾಳೆ. ಅಪ್ಪ ಮಹೇಶ್ ಭಟ್ ದೂರದ ಮುಂಬೈನಿಂದಲೇ ಮಗಳ ಎರಡು ಭಾವುಕ ಫೋಟೋಗಳನ್ನು ಇನ್‌ಸ್ಟಾಗ್ರಾಮ್ ನಲ್ಲಿ ಪೋಸ್ಟ್ ಮಾಡಿ ಶುಭ ಹಾರೈಸಿದ್ದಾರೆ.

ಈ ಮಧ್ಯೆ ಮೇಘನಾ ಗುಲ್ಜಾರ್ ನಿರ್ದೇಶನದ 'ರಾಜಿ' ಚಿತ್ರದ ಟ್ರೇಲರ್ ಕೂಡಾ ಸಿದ್ಧವಾಗಿದೆ. ಹರಿಂದರ್ ಸಿಕ್ಕಾ ಬರೆದಿರುವ 'ಕಾಲಿಂಗ್ ಸೆಹಮತ್' ಕಾದಂಬರಿ ಆಧಾರಿತ ಈ ಚಿತ್ರದಲ್ಲಿ ಅಲಿಯಾಗೆ ನಟನೆಯನ್ನು ತೋರಿಸಲು ಅತ್ಯುತ್ತಮ ಅವಕಾಶ ಸಿಕ್ಕಿದೆಯಂತೆ. ಅನಿಲ್ ಕಪೂರ್ ಸಹಿತ ಚಿತ್ರರಂಗದ ಹಲವು ಗಣ್ಯರಿಂದ ಅಲಿಯಾಗೆ ಹುಟ್ಟುಹಬ್ಬದ ಶುಭಾಶಯಗಳು ಮಹಾಪೂರವೇ ಹರಿದು ಬಂದಿರುವುದು ತುಂಬ ಖುಷಿ ತಂದಿದೆಯಂತೆ.



## ಅಕ್ಷಯ್ ಹೊಸ ರೂಪ

ಅಕ್ಷಯ್ ಖನ್ನಾ ಸಿನಿಮಾದಲ್ಲಿ ನಟಿಸುವುದು ಅಪರೂಪಕ್ಕೇ ಆದರೂ, ಅತ್ಯುತ್ತಮ ಪಾತ್ರಗಳನ್ನು ತನ್ನದಾಗಿಸಿಕೊಳ್ಳುತ್ತಿದ್ದಾರೆ ಎನ್ನುವುದು ನಿಸ್ಸಂಶಯ. ಶ್ರೀದೇವಿ ಅಭಿನಯದ ಕೊನೆಯ ಚಿತ್ರ 'ಮಾಮ್' ಮತ್ತು 'ಇತ್ತೆಫಾಖ್' ಎರಡೂ ಅಕ್ಷಯ್ ಖನ್ನಾ ಜೀವ ತುಂಬಿದ ಪಾತ್ರಗಳೇ. ಇದೀಗ ಮನೀಶ್ ಗುಪ್ತಾ ಅವರ ಮುಂದಿನ ಚಿತ್ರ 'ಸೆಕ್ಷನ್ 375: ಮರ್ಜಿ ಯಾ ಜಬರ್ದಸ್ತಿ' ಚಿತ್ರದಲ್ಲಿ ವಕೀಲನ ಹೊಸ ಪಾತ್ರಕ್ಕೆ ಅಕ್ಷಯ್ ಸಿದ್ಧರಾಗಿದ್ದಾರೆ. ಈ ಚಿತ್ರ ನಿಜ ಜೀವನದ 10 ಘಟನೆಗಳನ್ನು ಆಧರಿಸಿದೆಯಂತೆ. ಈ ಸಸ್ಪೆನ್ಸ್ ಡ್ರಾಮಾ ಏಪ್ರಿಲ್‌ನಲ್ಲಿ ಶೂಟಿಂಗ್ ಶುರು ಮಾಡಲಿದೆ. ಅತ್ಯಾಚಾರದ ವಿರುದ್ಧದ ಕಾನೂನನ್ನು ಹೇಗೆ ದುರ್ಬಳಕೆ ಮಾಡಬಹುದು ಎನ್ನುವುದು ಕಥೆಯ ತಿರುಳು ಎಂದು ಮನೀಶ್ ಕ್ಲೂ ಕೊಟ್ಟಿದ್ದಾರೆ.

ಇದರ ಜೊತೆಗೆ ರಾಜಕೀಯ ಥ್ರಿಲ್ಲರ್ ಒಂದರಲ್ಲಿ ನಟಿಸಲೂ ಅಕ್ಷಯ್ ಒಪ್ಪಿಕೊಂಡಿದ್ದಾರೆ. ಅದೂ ಅನುಪಮ್ ಖೇರ್‌ರಂತಹ ಅಭಿಜಾತ ನಟನ ಜತೆಗೆ. ಮಾಜಿ ಪ್ರಧಾನಿ ಮನಮೋಹನ್‌ಸಿಂಗ್ ಅವರ ಕುರಿತು ಸಂಜಯ್ ಬಾರು ಬರೆದಿರುವ 'ದಿ ಆ್ಯಕ್ಸಿಡೆಂಟಲ್ ಪ್ರೈಮ್ ಮಿನಿಸ್ಟರ್' ಎನ್ನುವ ಜೀವನ ಚರಿತ್ರೆ ಆಧರಿಸಿದ ಚಿತ್ರವಿದು. ಅಕ್ಷಯ್ ಸಂಜಯ್ ಬಾರು ಅವರ ಪಾತ್ರವನ್ನೇ ನಿರ್ವಹಿಸುತ್ತಿದ್ದಾರೆ. ಈ ಪಾತ್ರದ ಬಗ್ಗೆ ಈಗಲೇ ತುಂಬ ಥ್ರಿಲ್ ಅನುಭವಿಸುತ್ತಿದ್ದೇನೆ ಎಂದಿದ್ದಾನೆ ಅಕ್ಷಯ್. ಬಹುತೇಕ ಡಿಸೆಂಬರ್‌ನಲ್ಲಿ ಈ ಚಿತ್ರ ಬಿಡುಗಡೆ ಆಗಲಿದೆ. ಮುಂದಿನ ವರ್ಷ ನಡೆಯಲಿರುವ ಮಹಾ ಚುನಾವಣೆಗೆ ಮುನ್ನ ಈ ಚಿತ್ರ ವಿವಾದ ಉಂಟು ಮಾಡುವ ಸಾಧ್ಯತೆಯೂ ಇದೆಯಂತೆ.

■ ಬಿಂದು